23. ಬೆರಳಚ್ಚುಗಾರರು	–	15	–	13
24. ಟ್ರೇಸರ್	–	3	–	–
25. ಬ್ಲೂಪ್ರಿಂಟರ್	–	3	–	–
26. ಅನುಚರರು (ಅಟೆಂಡರ್)	–	1	–	1
27. ನಾಲ್ಕನೇ ದರ್ಜೆ ನೌಕರರು (ಪೀವನ್)	1	15	–	34
28. ಕಾವಲುಗಾರರು (ವಾಚ್‌ಮನ್)	1	11	–	–
29. ವಾಹನ ಚಾಲಕರು	1	12	–	11
ಒಟ್ಟು	30	166	27	197

ಪ್ರತಿವಿಧಾನ ಸಭಾಕ್ಷೇತ್ರಕ್ಕೆ 40 ಲಕ್ಷ ರೂಪಾಯಿಗಳನ್ನು ಒದಗಿಸುವ ತೀರ್ಮಾನ

151 (452) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆ ಮುಖಾಂತರ 40 ಲಕ್ಷ ರೂಪಾಯಿ ಒದಗಿಸಲು (1992–93)ರಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೆ;

ಆ) ಹಾಗಿದ್ದಲ್ಲಿ ಅದಕ್ಕೆ ಹಣ ಒದಗಿಸಲಾಗಿದೆಯೆ;

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಪ್ರಸ್ತಾಪವು ಪರಿಶೀಲನೆಯಲ್ಲಿದೆ.

ಆ) ಇಲ್ಲ

ಇ) ಅನುದಾನ ನಿಗದಿಪಡಿಸುವ ವಿಷಯವು ಪರಿಶೀಲನೆಯಲ್ಲಿದೆ.

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತೀವೃಷ್ಟಿಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಹಣ

152 (544) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತ ಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಅತೀವೃಷ್ಟಿಯಿಂದ ಯಾವ ಯಾವ ಊರಿನ ಕೂಡ ರಸ್ತೆಗಳು ಕೊಚ್ಚಿ ಹೋಗಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ (ವಿವರ ಕೊಡುವುದು);

ಆ) ಈ ರಸ್ತೆಗಳ ರಿಪೇರಿಗೆ ಅಂದಾಜುಗಳು ತಯಾರಾಗಿದೆಯೆ (ವಿವರ ಕೊಡುವುದು);

ಇ) ಈ ಅಂದಾಜುಗಳ ಒಟ್ಟು ಮೊಬಲಗೆಷ್ಟು (ವಿವರ ಕೊಡುವುದು);

ಈ) ಈ ರಸ್ತೆಗಳ ರಿಪೇರಿಗೆ ಇದುವರೆವಿಗೆ ಎಷ್ಟು ಹಣ ಖರ್ಚಾಗಿದೆ (ವಿವರ ಕೊಡುವುದು);

ಉ) ಈ ರಸ್ತೆಗಳ ರಿಪೇರಿಗಳು ಇನ್ನೆಷ್ಟು ಕಾಲಾವಧಿಯಲ್ಲಿ ಮುಗಿಯಲಿವೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಯವರು):–

ಅ) ಹಾಸನ ಜಿಲ್ಲೆಯ ಕಸಬ, ಕಟ್ಟಾಯ ಹಾಗೂ ಶಾಂತಿ ಗ್ರಾಮದಲ್ಲಿ 1992ರಂದು ಆದ ಅತೀವೃಷ್ಟಿಯಿಂದ ರಸ್ತೆಗಳಿಗೆ ಆಗಿರುವ ಹಾನಿಯ ವಿವರ ಲಗತ್ತಿಸಿರುವ ಪಟ್ಟಿಯನ್ನು ವಿವರಿಸಿದೆ.

ಆ) ಅಂದಾಜು ಮಾಡಿದೆ. ವಿವರವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ.

ಇ) 22.61 ಲಕ್ಷ ರೂ.ಗಳು ವಿವರವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ.

ಈ) 0.90 ಲಕ್ಷ ರೂಗಳ ವಿವರವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ.

ಉ) ವಿವರವನ್ನು ಪಟ್ಟಿಯಲ್ಲಿ ನೀಡಲಾಗಿದೆ.

ಪ್ರಶ್ನೆ ಸಂಖ್ಯೆ 544ಕ್ಕೆ ಅನುಬಂಧ

1992ರಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ರಸ್ತೆಗಳ ವಿವರ	ರಸ್ತೆಗಳ ದುರಸ್ಥಿಗೆ ಅಂದಾಜು	ತುರ್ತು ದುರಸ್ಥಿಗೆ ಆಗಿರುವ ವೆಚ್ಚ	ಷರಾ
	(ಲಕ್ಷ ರೂ.ಗಳಲ್ಲಿ)		
ಕಸಬಾ ಹೋಬಳಿ			
1. ಬಿಳಿಕೆರೆ – ಕರಿಕೆರೆ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	0.90	0.08	ಅತೀವೃಷ್ಟಿ ಪರಿಹಾರ ಅನುದಾನದ ಲಭ್ಯತೆ ಇಲ್ಲದಿದ್ದುದರಿಂದ ಅಂದಾಜು ಮಂಜೂರಾಗಿಲ್ಲ. ಆದಾಗ್ಯೂ ಕೆಲವು ತುರ್ತು ದುರಸ್ಥಿಯನ್ನು ಲೋಕೋಪಯೋಗಿ ಇಲಾಖೆ ಎನ್.ಎಂ.ಆರ್. ನೌಕರ ವರ್ಗದವರಿಂದ ಮಾಡಿಸಲಾಗಿದೆ. ಪೂರ್ಣ ದುರಸ್ಥಿಯನ್ನು ಅನುದಾನ ದೊರೆತ ನಂತರ ಮಾಡಲಾಗುವುದು.
ಕಟ್ಟಾಯ ಹೋಬಳಿ			
1. ಕಟ್ಟಾಯ–ಹಳ್ಳಿಬೈಲು ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	6.40	0.08	
2. ಗೋರುರ–ಬಿನಕುರಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)			

ಶಾಂತಿ ಗ್ರಾಮ ಹೋಬಳಿ 1. ಗೋರುರು–ಬಿನಕುರಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ) 2. ಹೊಸಹಳ್ಳಿ – ಬಿಡಿಗನವಿಕೆ ಹಳ್ಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ) 3. ಬೆಟ್ಟದಪುರ – ಹೆರಗು – ಶಾಂತಿ ಗ್ರಾಮ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ) 4. ಕಾಶಿಕ – ಮರ್ಕುಲಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	13.90	0.14	
5. ಕಾಶಿಕ – ಮರ್ಕುಲಿ ರಸ್ತೆ (ಜಿಲ್ಲಾ ಪರಿಷತ್ ವ್ಯಾಪ್ತಿ)	0.20	0.26	ದುರಸ್ಥಿ ಮುಗಿದಿದೆ
6. ಅಂಜುಗ–ಗುಡುಗನಹಳ್ಳಿ – ಬನವಾಸಿ (ಜಿಲ್ಲಾ ಪರಿಷತ್ ವ್ಯಾಪ್ತಿ)	1.00	0.57	ಮಾರ್ಚ್ 93ರ ಒಳಗಾಗಿ ಮುಗಿಸಲಾಗುವುದು
7. ಬಿ.ಎಂ. ರಸ್ತೆಯಿಂದ ಕಾಶಿಕ – ಮರ್ಕುಲಿ ವಯಾ ದೊಡ್ಡಗೇಣಿಗೆರೆ ರಸ್ತೆ (ಜಿಲ್ಲಾ ಪರಿಷತ್ ವ್ಯಾಪ್ತಿ)	0.15	0.07	
	22.81	1.20	

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಡ್ಯಾಮೇಜ್ ಆದ ಕೆರೆಗಳು

153 (543) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತಿಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಧಾರಾಕಾರ ಮಳೆಯಿಂದ ಯಾವ ಯಾವ ಊರುಗಳಲ್ಲಿ ಯಾವ ಯಾವ ಸಣ್ಣ ಕೆರೆಗಳಿಗೆ ಹಾನಿಯಾಗಿದೆ (ವಿವರ ಕೊಡುವುದು);

ಆ) ಈ ಎಲ್ಲಾ ಕೆರೆಗಳ ದುರಸ್ತಿಗೆ ಅಂದಾಜುಗಳು ತಯಾರಾಗಿವೆಯೇ (ವಿವರ ಕೊಡುವುದು);

ಈ) ಈ ಬಾಬ್ತಿನಲ್ಲಿ ಇದುವರೆವಿಗೆ ಆ ಕೆರೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಉ) ಆ ಕೆರೆಗಳ ದುರಸ್ತಿಯು ಎಷ್ಟು ಕಾಲಾವಧಿಯಲ್ಲಿ ಮುಗಿಯಲಿದೆ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-